KABR320036762016

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ದೇವನಹಳ್ಳಿ.**

**ಸಿ.ಸಿ. ನಂಃ 2768/2016**

**ದಿನಾಂಕಃ 11ನೇ ಜೂನ್ 2026**

**ಉಪಸ್ಥಿತರುಃ ಶ್ರೀಮತಿ. ಚಂದ್ರಿಕಾ. ಕೆ. ಟಿ.** ಬಿಸಿಎ. ಎಲ್.ಎಲ್.ಬಿ.
ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.

**ಪಿರ್ಯಾದುದಾರರು** : ರಾಜ್ಯದ ಪರ ವಿಜಯಪುರ ಪೋಲಿಸ್ ಠಾಣೆ,
**(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)**

-: **ವಿರುದ್ಧ :-**

**ಆರೋಪಿಗಳು** :

1. ವೀರಪ್ಪ ಬಿನ್ ಲೇಟ್ ಮುನಿಸೊಣ್ಣಪ್ಪ,
ವಯಸ್ಸುಃ70 ವರ್ಷ,

2. ಮುನಿರತ್ನಮ್ಮ ಕೊಂ ಕೃಷ್ಣಮೂರ್ತಿ
ವಯಸ್ಸುಃ **36** ವರ್ಷ**,**
ಇಬ್ಬರ ವಾಸಃ ಕೊರಮಂಗಲ,
ವಿಜಯಪುರ ಹೋಬಳಿ,
ದೇವನಹಳ್ಳಿ ತಾಲ್ಲೂಕು.

(**ಶ್ರೀ. ಮುನಿರಾಜು ವಕೀಲರಿಂದ**)

* * * * * * * *

| | | |
|---|---|---|
| **ಪಿರ್ಯಾದುದಾರರ ಹೆಸರು** | : | **ಶ್ರೀ. ಕೆ. ಎಂ. ಕೃಷ್ಣಪ್ಪ ಬಿನ್ ಲೇಟ್ ಮುನಿಕೆಂಪಣ್ಣ** |
| **ಆಪಾದಿಸಲಾದ ಆಪಾದನೆಗಳು** | : | **ಭಾ.ದಂ.ಸಂ. ಕಲಂ. 504, 506, 108 ಸಹವಾಚಕ ಕಲಂ. 34** |
| **ಕೃತ್ಯ ನಡೆದ ದಿನಾಂಕ** | : | **17-02-2015** |
| **ಕೃತ್ಯ ವರದಿ ಮಾಡಿದ ದಿನಾಂಕ** | : | **04-05-015** |
| **ಆಪಾದಿತನ ಬಂಧನ ದಿನಾಂಕ** | : | |
| **ಜಾಮೀನು ನೀಡಿದ ದಿನಾಂಕ** | : | **03-03-2022** |
| **ಆಪಾದಿತ ಬಂದನದಲ್ಲಿರುವ ದಿನಗಳು** | : | **– –** |
| **ಸಾಕ್ಷಿದಾರರ ಹೇಳಿಕೆ ಪ್ರಾರಂಭವಾದ ದಿನಾಂಕ** | : | **16-07-2018** |
| **ಸಾಕ್ಷಿದಾರರ ಹೇಳಿಕೆ ಮುಕ್ತಾಯದ ದಿನಾಂಕ** | : | **30-07-2024** |
| **ತೀರ್ಮಾನ ಹೊರಡಿಸುವ ದಿನಾಂಕ** | : | **13-02-2026** |

* * * * * * * *

## ತೀರ್ಪು

ವಿಜಯಪುರ ಪೊಲೀಸ್ ಠಾಣೆಯ ಆರಕ್ಷಕ ಉಪನೀರಿಕ್ಷಕರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 506, 108 **ಸಹವಾಚಕ ಕಲಂ. 34** ರಡಿಯಲ್ಲಿ ಅಪರಾಧವೆನಿಸಲ್ಪಟ್ಟ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪರ ಮೊಕದ್ದಮೆಯ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತಿದೆಃ**

ವಿಜಯಪುರ ಪೋಲಿಸ್ ಠಾಣಾ ವ್ಯಾಪ್ತಿಯ ದೇವನಹಳ್ಳಿ ತಾಲ್ಲೂಕು ವಿಜಯಪುರ ಹೋಬಳಿ, ಕೋರಮಂಗಲ ಗ್ರಾಮದ ಪಂಚಾಯ್ತಿ ಕಾರ್ಯಾಲಯದ ಮುಂಭಾಗ ದಿ. 17-02-2015 ರಂದು ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಕೋರಮಂಗಲ ಪಂಚಾಯ್ತಿಯ ಹೌಸ್ ನಂ. 24/ಬಿ ಮತ್ತು 188/2 ರ ಸ್ವತ್ತಿನ ವಿಚಾರದಲ್ಲಿ ಆರೋಪಿಗಳು ದ್ವೇಷವನ್ನು ಇಟ್ಟುಕೊಂಡು ಚಾಸಾ-1 ರವರ ಮೇಲೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ನೀನು ಪಂಚಾಯ್ತಿ ಕಚೇರಿ ಬಳಿ ಬಂದರೆ ನಿನ್ನನ್ನು ಪ್ರಾಣ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುವುದರಿಂದ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಲಿಖಿತ ದೂರನ್ನು ನೀಡಿದ್ದಾಗಿರುತ್ತದೆ.

**3.** ಆರೋಪಿತರ ವಕೀಲರ ಮುಖಾಂತರ ಹಾಜರಾಗಿ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡು, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಅಡಿಯಲ್ಲಿ ಆರೋಪಿತರಿಗೆ ಅವರ ವಿರುದ್ಧವಿರುವ ದೋಷಾರೋಪಣೆ ಪಟ್ಟಿಯ ನಕಲನ್ನು ನೀಡಲಾಗಿದೆ. ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ರಚಿಸಿ, ಓದಿ ವಿವರಿಸಿ ಹೇಳಲಾಗಿ ಆರೋಪಿತರು ತಾವು ಯಾವುದೇ ತಪ್ಪು ಮಾಡಿಲ್ಲವೆಂದೂ ಹಾಗೂ ವಿಚಾರಣೆಯಾಗಬೇಕೆಂದು ಹೇಳಿದ್ದರಿಂದ ಸಾಕ್ಷಿಗಳ ವಿಚಾರಣೆಗಾಗಿ ಪ್ರಕರಣವನ್ನು ನಿಗದಿಪಡಿಸಲಾಯಿತು.

**4.** ಅಭಿಯೋಜನೆಯ ಪರ ಹಾಜರುಪಡಿಸಿದ ಸಾಕ್ಷಿಗಳ ವಿಚಾರಣೆಯಲ್ಲಿ ಚಾಸಾ.6 ರವರನ್ನು ಪ್ರಾಸಾ.1 ಎಂದು ಸಾಕ್ಷ್ಯ ವಿಚಾರಣೆಗೆ ಒಳಪಡಿಸಲಾಗಿರುತ್ತದೆ. ಚಾಸಾ.6 ರವರು ಈ ಕೇಸಿನ ತನಿಖಾಧಿಕಾರಿ ಸಾಕ್ಷಿದಾರರಾಗಿದ್ದು, ಚಾ.ಸಾ2 ಪ್ರತ್ಯಕ್ಷ ಸಾಕ್ಷಿದಾರರು ಇವರನ್ನು ಪ್ರಾ.ಸಾ-2 ಎಂದು, ಚಾಸಾ-5 ಮಹಜರ್ ಸಾಕ್ಷಿದಾರರರು ಇವರನ್ನು ಪ್ರಾಸಾ-3 ಎಂದು, ಪ್ರಾ.ಸಾ-4 ರವರು ತನಿಖಾಧಿಕಾರಿ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತದೆ. ಚಾ.ಸಾ3 ಮತ್ತು ಚಾ.ಸಾ4ರವರಿಗೆ ನ್ಯಾಯಾಲಯದಿಂದ ಹಲವಾರು ಬಾರಿ ಸಮನ್ಸ್ ಜಾರಿ ಮಾಡಿದರೂ ಸಹ ಅಭಿಯೋಜನೆಯು ಅವರನ್ನು ಸಾಕ್ಷ್ಯ ವಿಚಾರಣೆಗೆ ಒಳಪಡಿಸಿರುವುದಿಲ್ಲ. ಆ ಕಾರಣ ಅವರನ್ನು ವಿಚಾರಣೆಯಿಂದ

ಕೈಬಿಡಲಾಗಿರುತ್ತದೆ. ಅಭಿಯೋಜನೆಯ ಪರ ನಾಲ್ಕು ದಾಖಲೆಗಳನ್ನು ನಿಪಿ.1 ರಿಂದ ನಿ.ಪಿ4 ಎಂದು ಗುರುತಿಸಿಕೊಂಡಿರುತ್ತಾರೆ.

**5.** ಸದರಿ ಮೊಕದ್ದಮೆಯಲ್ಲಿ ಸಾಕ್ಷಿಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ಪೂರಕ ಸಾಕ್ಷ್ಯ ನುಡಿದಿರುವ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅಡಿಯಲ್ಲಿ ಆರೋಪಿಗಳ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಆರೋಪಿಗಳು ತಮ್ಮ ಹೇಳಿಕೆಗಳಲ್ಲಿ, ಅವರ ಮೇಲೆ ಹೊರಿಸಿರುವ ಆಪಾದನೆಗಳನ್ನು ಅಲ್ಲೆಗಳೆದಿರುತ್ತಾರೆ ಮತ್ತು ತಮ್ಮ ಪರ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.

**6.** ಸಹಾಯಕ ಸರ್ಕಾರಿ ಅಭೀಯೋಜಕರ ಹಾಗೂ ಆರೋಪಿಗಳ ಪರ ವಕೀಲರ ವಾದವನ್ನು ಕೇಳಿರುತ್ತೇನೆ. ಹಾಜರುಪಡಿಸಿದ ದಾಲಾತಿಗಳನ್ನು ಪರಿಶೀಲಿಸಿರುತ್ತೇನೆ.

**7. ಈ ನ್ಯಾಯಾಲಯವು ತೀರ್ಮಾನಿಸಬೇಕಾದ ಅಂಶಗಳಃ**

1. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ದಿ. 17-112-2015 ರಂದು ಬೆಳಿಗ್ಗೆ 11-00 ಗಂಟೆಯ ಸಮಯದಲ್ಲಿ, ವಿಜಯಪುರ ಪೋಲಿಸ್ ಠಾಣೆಯ ವ್ಯಾಪ್ತಿಯ ದೇವನಹಳ್ಳಿ ತಾಲ್ಲೂಕು, ವಿಜಯಪುರ ಹೋಬಳಿ ಕೋರಮಂಗಲ ಗ್ರಾಮದ ಪಂಚಾಯಿತಿಯ ಹೌಸ್ ಲೀಸ್ಟ್ ನಂ. 24/ಬಿ ಮತ್ತು 188/2 ಸ್ವತ್ತಿನ ವಿಚಾರದಲ್ಲಿ ಆರೋಪಿಗಳು ಸಮಾನ ಉದ್ದೇಶವನ್ನು ಇಟ್ಟುಕೊಂಡು ಚಾಸಾ-1 ರವರ ಮೇಲೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.504 ಸಹವಾಚಕ ಕಲಂ. 34 ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ ?

2. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು ಸಾಕ್ಷಿ 1ರವರನ್ನು ಕುರಿತು ನೀವು ಪಂಚಾಯಿತಿ ಕಚೇರಿ ಬಳಿ ಬಂದರೆ ನಿನ್ನನ್ನು ಪ್ರಾಣ ಸಹಿತ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.506

ಸಹವಾಚಕ ಕಲಂ. 34 ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

3. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತರು ಸಮಾನ ಉದ್ದೇಶದಿಂದ ಚಾಸಾ-1 ರವರ ಮೇಲೆ 1ನೇ ಆರೋಪಿ, 2ನೇ ಆರೋಪಿಯನ್ನು ಗಲಾಟೆ ಮಾಡಲು ಕುಮ್ಮಕ್ಕು ನೀಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.108 ಸಹವಾಚಕ ಕಲಂ. 34 ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

4. ಈ ಬಗ್ಗೆ ಆದೇಶವೇನು?

**8.** ಈ ಕೆಳಕಂಡ ಕಾರಣಗಳಿಂದಾಗಿ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತವೆ.

ಅಂಶ 1 ರಿಂದ 3 : **ನಕಾರಾತ್ಮಕವಾಗಿ**

ಅಂಶ 4 : ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

**9. ಅಂಶ 1 ರಿಂದ 3:-** ಈ ಅಂಶಗಳು ಒಂದಕ್ಕೊಂದು ಪೂಕರವಾಗಿರುವುದರಿಂದ ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**10.** ನಿ.ಪಿ1 ದೂರಗಿದ್ದು, ಪ್ರಥಮ ದಾಖಲಾತಿಯಾಗಿದ್ದು, ನಿ.ಪಿ1ನ್ನು ಚಾ.ಸಾ1ರವರು ದಾಖಲು ಮಾಡಿರುತ್ತಾರೆ. ನಿ.ಪಿ1ರಲ್ಲಿ ಚಾ.ಸಾ1ರವರು ವಿಜಯಪುರ ಪೋಲಿಸ್ ಠಾಣಾ ವ್ಯಾಪ್ತಿಯ ದೇವನಹಳ್ಳಿ ತಾಲ್ಲೂಕು ವಿಜಯಪುರ ಹೋಬಳಿ, ಕೋರಮಂಗಲ ಗ್ರಾಮದ ಪಂಚಾಯ್ತಿ ಕಾರ್ಯಾಲಯದ ಮುಂಭಾಗ ದಿ. 17-02-2015 ರಂದು ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಕೋರಮಂಗಲ ಪಂಚಾಯ್ತಿಯ ಹೌಸ ಲಿಸ್ಟ್ ನಂ. 24/ಬಿ ಮತ್ತು 188/2 ರ ಸ್ವತ್ತಿನ ವಿಚಾರದಲ್ಲಿ

ಆರೋಪಿಗಳು ದ್ವೇಷವನ್ನು ಇಟ್ಟುಕೊಂಡು ಚಾಸಾ-1 ರವರ ಮೇಲೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ನೀನು ಪಂಚಾಯ್ತಿ ಕಚೇರಿ ಬಳಿ ಬಂದರೆ ನಿನ್ನನ್ನು ಪ್ರಾಣ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುವುದಾಗಿ ನೀಡಿದ ದೂರಾಗಿರುತ್ತದೆ.

**11.** ಚಾ.ಸಾ-6 ರವರನ್ನು ಪ್ರಾ.ಸಾ-1 ಎಂದು ವಿಚಾರಣೆಗೆ ಒಳಪಡಿಸಿದ್ದು, ಪ್ರಾ.ಸಾ1 ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 04.05.2015 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ನ್ಯಾಯಾಲಯದ ಪಿಸಿ ನಂ.736 ರವರು ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದ ಖಾಸಗಿ ದೂರು ಸಂ.155/2015 ನ್ನು ತಂದು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 49/2015 ರಂತೆ ಪ್ರಕರಣ ದಾಖಲಿಸಿ ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಕಡತದಲ್ಲಿರುವ ಖಾಸಗಿ ದೂರನ್ನು ಮತ್ತು ಪ್ರ.ವ. ವರದಿ ಹಾಗೂ ಅವುಗಳಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದುಐ ನಂತರ ಅದೇ ದಿನ ಚಾಸಾ-1 ರವರು ತೋರಿಸಿದ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪಂಚರಾದ ಚಾಸಾ-4 ಮತ್ತು ಚಾಸಾ-5 ರವರ ಸಮಕ್ಷಮದಲ್ಲಿ ಮಧ್ಯಾಹ್ನ 1.00 ಗಂಟೆಯಿಂದ 1.45 ಗಂಟೆಯವರೆಗೆ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**12.** ಚಾ.ಸಾ-2 ರವರನ್ನು ಪ್ರಾ.ಸಾ-2 ಎಂದು ವಿಚಾರಣೆಗೆ ಒಳಪಡಿಸಿದ್ದು, ಪ್ರಾ.ಸಾ2 ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಆರೋಪಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ. ನಾನು ಈ ಪ್ರಕರಣದ ಸಂಬಂಧ ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ2 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅಭಿಯೋಜನೆ ಮಾಡಿದ ಪಾಟೀ ಸವಾಲಿನ ಸಲಹೆಗಳನ್ನು ಪ್ರಾಸಾ-2 ನಿರಾಕರಿಸಿರುತ್ತಾರೆ. ಪ್ರಾಸಾ.2 ರವರ ಈ ಮೇಲಿನ ಸಾಕ್ಷ್ಯ ಹೇಳಿಕೆಗಳನ್ನು ಗಮನಿಸಿದಾಗ ಪ್ರಾಸಾ.2 ನಿಪಿ.4 ರಲ್ಲಿರುವ ಎಲ್ಲಾ ಹೇಳಿಕೆಗಳಿಗೆ ಸಂಪೂರ್ಣ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದು ಸ್ಪಷ್ಟವಾಗಿರುತ್ತದೆ. ಪ್ರಾಸಾ.2 ರವರು ಅಭಿಯೋಜನೆಯವರ

ಪ್ರಕರಣವನ್ನೇ ಸಂಪೂರ್ಣ ನಿರಾಕರಿಸಿದ್ದು ಪ್ರತಿಕೂಲ ಸಾಕ್ಷ್ಯವಾಗುವ ಮುಖಾಂತರ ಅಭಿಯೋಜನೆಯವರಿಗೆ ಯಾವುದೇ ಸಹಕಾರವನ್ನು ನೀಡಿರುವುದಿಲ್ಲ.

**13.** ಚಾ.ಸಾ-5 ರವರನ್ನು ಪ್ರಾ.ಸಾ-3 ಎಂದು ವಿಚಾರಣೆಗೆ ಒಳಪಡಿಸಿದ್ದು, ಪ್ರಾ.ಸಾ3 ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಕೋರಿಕೆ ಮೇರೆಗೆ ಕಾಗದ ಪತ್ರಗಳಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ-3 ಅನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-3ಕ್ಕೆ ಎಲ್ಲಿ ಯಾವಾಗ ಮತ್ತು ಏಕೆ ಸಹಿ ಮಾಡಿರುತ್ತೇ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣ ಸಂಬಂಧ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-3 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅಭೀಯೋಜನೆ ಮಾಡಿದ ಪಾಟೀ ಸವಾಲಿನ ಸಲಹೆಗಳನ್ನು ಪ್ರಾಸಾ-3 ನಿರಾಕರಿಸಿರುತತಾರೆ. ಪ್ರಾಸಾ-3 ರವರ ಈ ಮೇಲಿನ ಸಾಕ್ಷ್ಯ ಹೇಳಿಕೆಗಳನ್ನು ಗಮನಿಸಿದಾಗ ಪ್ರಾಸಾ-3 ರವರು ಅಭಿಯೋಜನೆಯವರ ಪ್ರಕರಣವನ್ನೇ ಸಂಪೂರ್ಣ ನಿರಾಕರಿಸಿದ್ದು ಪ್ರತಿಕೂಲ ಸಾಕ್ಷ್ಯವಾಗುವ ಮುಖಾಂತರ ಅಭಿಯೋಜನೆಯವರಿಗೆ ಯಾವುದೇ ಸಹಕಾರವನ್ನು ನೀಡಿರುವುದಿಲ್ಲ.

**14.** ಈ ಪ್ರಕರಣದಲ್ಲಿ ಚಾಸಾ-6 ಮತ್ತು ಚಾಸಾ-7 ತನಿಖಾಧಿಕಾರಿಗಳಾಗಿದ್ದು ಅವರನ್ನು ನ್ಯಾಯಾಲಯದ ಮುಂದೆ ಪ್ರಾಸಾ-1 ಮತ್ತು ಪ್ರಾಸಾ-4 ಎಂದು ವಿಚಾರಣೆಗೆ ಒಳಪಡಿಸಲಾಗಿರುತ್ತದೆ. ಪ್ರಾಸಾ-1 ಮತ್ತು ಪ್ರಾಸಾ-4 ರವರ ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣವನ್ನು ದಾಖಲು ಮಾಡಿ ತನಿಖೆಯನ್ನು ಮುಂದುವರೆಸಿಕೊಂಡು ಮಹಜರ್ ಮಾಡಿ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು ಆರೋಪಿಯ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಮಾಡಿದ್ದ ಪಾಟೀಸಾವಲಿನಲು ತಾವು ತನಿಖೆ ಮಾಡಿರುವ ಬಗ್ಗೆ ಸಾಕ್ಷ್ಯ ನುಡಿದಿದ್ದು ಹಾಗೂ ಆರೋಪಿ ಪರ ವಕೀಲರು ಸಹಲೆಗಳನ್ನು ನಿರಾಕರಿಸಿರುತ್ತಾರೆ. ಈ ಪ್ರಕರಣದಲ್ಲಿ ಚಾಸಾ-1 ದೂರುದಾರಾರು ಸಾಕ್ಷಿಯಾಗಿದ್ದು ಹಾಗೂ ಚಾಸಾ-3 ಮತ್ತು 4 ಪ್ರತ್ಯಕ್ಷ ಸಾಕ್ಷಿ ಹಾಗೂ ಮಹಜರ್ ಸಾಕ್ಷಿಯಾಗಿರುತ್ತಾರೆ ಅವರಗಳು ನ್ಯಾಯಾಲಯದಿಂದ ಹಲವಾರು ಬಾರಿ ಸಮನ್ಸ್ ಮತ್ತು ವಾರೆಂಟ್ ಗಳು ಹಲವು ಬಾರಿ

ಜಾರಿಯಾದರು ಸಹ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ, ವಿಚಾರಣೆಗೆ ಒಳಪಟ್ಟ ಪ್ರತ್ಯಕ್ಷ ಸಾಕ್ಷಿ ಚಾಸಾ-2 ಹಾಗೂ ಮಹಜರ್ ಸಾಕ್ಷಿ ಚಾಸಾ-5 ರವರು ಅಭಿಯೋಜನೆ ಪೂರಕವಾದ ರೀತಿಯಲ್ಲಿ ಸಾಕ್ಷ್ಯ ನುಡಿದಿರುವುದಿಲ್ಲ ಹಾಗೂ ಈ ಘಟನೆಯ ಬಗ್ಗೆ ತಮ್ಮಗೆ ಏನು ತಿಳಿದಿಲ್ಲವೆಂಬ ರೀತಿಯಲ್ಲಿ ಸಾಕ್ಷ್ಯ ನುಡಿದಿರುತ್ತಾರೆ. ಹಾಗಾಗಿ ಪ್ರಮುಖ ಸಾಕ್ಷಿದಾರಾರ ಪೂರಕ ಸಾಕ್ಷ್ಯವಿಲ್ಲದೇ ಕೇವಲ ತನಿಖಾಧಿಕಾರಿಗಳ ಸಾಕ್ಷದಾರಾರಗಳ ಸಾಕ್ಷ್ಯದ ಆಧಾರದ ಮೇರೆ ಆರೋಪಿಯು ಸಾಭಿತುಪಡಿಸಲು ಸಾಧ್ಯವಾಗುವುದಿಲ್ಲ, ತನಿಖಾಧಿಕಾರಿಗಳ ಸಾಕ್ಷಿಯು ಕೇವಲ ಘಟನೆಯ ನಂತರ ಅವರು ಕೈಗೊಂಡ ತನಿಖೆಯ ಬಗ್ಗೆ ಸಾಕ್ಷ್ಯ ನೀಡಿರುತ್ತಾರೆ. ಆದರೆ ಆರೋಪಿತರಿಂದಲೇ ಈ ಅಪರಾಧ ಆಗಿದೇ ಎಂಬುದನ್ನು ನಿಸ್ಸಂಶಯವಾಗಿ ಸಾಭಿತುಪಡಿಸುವಲ್ಲಿ ಕೇವಲ ಅವರ ಸಾಕ್ಷಾಯಾಗಿರುವುದಿಲ್ಲ ಅದಕ್ಕೆ ಪ್ರತ್ಯಕ್ಷ ಸಾಕ್ಷಿ ಹಾಗೂ ದೂರುದಾರಾರ ಸಾಕ್ಷ್ಯವು ಪೂರಕವಾಗಿರ ಬೇಕಾಗುತ್ತದೆ. ಆದರೆ ಈ ಪ್ರಕಣದಲ್ಲಿ ಮೇಲೆ ಹೇಳಿದಂತೆ ಪ್ರತ್ಯಕ್ಷ ಸಾಕ್ಷಿದಾರಾರ ಹಾಗೂ ದೂರುದಾರಾರದ ಸಾಕ್ಷ್ಯಾ ಲಭ್ಯವಿಲ್ಲದೇ ಕೇವಲ ತನಿಖಾಧಿಕಾರಿಗಳ ಸಾಕ್ಷ್ಯದ ಮೇಲೆಗೆ ಆರೋಪಿತರ ಮೇಲೆ ಹೊರೆಸಿರುವ ಆರೋಪವನ್ನು ಸಾಭಿತುಪಡಿಸುವಲ್ಲಿ ವಿಫಲವಾಗಿರುತ್ತದೆ. ಮೇಲೆ ಹೇಳಿರುವ ಈ ಎಲ್ಲಾ ಕಾರಣಗಳಿಂದಾಗಿ ಅಭಿಯೋಜನೆ ಆರೋಪಿ ವಿರುದ್ದ ಹೊರಿಸಲಾಗಿರುವ ಆರೋಪಗಳನ್ನು ಸಂಶಾಯಾತೀತವಾಗಿ ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಆದ್ದರಿಂದ ಆರೋಪಿ ವಿರುದ್ಧ ಆಪಾದಿಸಲಾದ ಆಪಾದನೆಗಳನ್ನು ಪುಷ್ಠಿಕರಿಸುವ ಸಾಕ್ಷ್ಯವು ನ್ಯಾಯಾಲಯದ ಮುಂದೆ ಲಭ್ಯವಿಲ್ಲದ ಕಾರಣ ಸಂಶಯ ಲಾಭವನ್ನು ಪಡೆಯಲು ಆರೋಪಿ ಅರ್ಹರಾಗಿದ್ದಾರೆಂದು ನ್ಯಾಯಾಲಯವು ಪರಗಣಿಸುತ್ತಾ 1 ರಿಂದ 3 ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**15.** **<u>ಅಂಶ 4:-</u>** ಈ ಮೇಲ್ಕಂಡ ಕಾರಣಗಳಿಂದಾಗಿ, ನಾನು ಈ ಅಂಶವನ್ನು ಕೆಳಕಂಡಂತೆ ಆದೇಶ ಮಾಡುತ್ತೇನೆ.

## <u>ಆದೇಶ</u>

ಆರೋಪಿ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆಯ ಕಲಂ.504, 506, 108 ಸಹವಾಚಕ ಕಲಂ.34 ರಡಿಯಲ್ಲಿನ ದೋಷಾರೋಪಣೆಗಳಿಂದ ನಿರ್ದೋಷಿಗಳೆಂದು ತೀರ್ಮಾನಿಸಿ, ದಂಡ

ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಹಾಗೂ ಅವರ ಜಾಮೀನುದಾರರ ಮುಚ್ಚಳಿಕೆ ಪತ್ರವು ಸಿ.ಆರ್.ಪಿ.ಸಿ. ತಿದ್ದುಪಡಿ ಕಾಯ್ದೆ ಕಲಂ.437ಎ ರಡಿಯಲ್ಲಿ 6 ತಿಂಗಳ ಅವಧಿಯವರೆಗೆ ಜಾರಿಯಲ್ಲಿರುತ್ತದೆ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನವನ್ನು ನೀಡಿ, ಬೆರಳಚ್ಚು ಮಾಡಿದ್ದು, ನನ್ನಿಂದ ಸೂಕ್ತವಾಗಿ ತಿದ್ದುಪಡಿಯಾದ ನಂತರ, ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು **ದಿನಾಂಕಃ 11 ನೇ ಜೂನ್ 2026** ರಂದು ಘೋಷಿಸಲಾಯಿತು)

**(ಚಂದ್ರಿಕಾ. ಕೆ. ಟಿ.)**
**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವನಹಳ್ಳಿ.**

## ಅನುಬಂಧ

**ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳುಃ**

ಪ್ರಾ.ಸಾ.1 - ಶಿವಕುಮಾರ್. ಟಿ. ಸಿ

ಪ್ರಾ.ಸಾ2 - ನಂಜೇಗೌಡ ಬಿನ್ ಮುನಿಸೊಣ್ಣಪ್ಪ

ಪ್ರಾ.ಸಾ.3 -ಮುನಿರಾಜು ಬಿನ್ ಚೊಕ್ಕಪ್ಪ

ಪ್ರಾ.ಸಾ.4 - ಎಂ.ಶ್ರೀನಿವಾಸ್ ಬಿನ್ ಮುನಿಯಪ್ಪ

**ಅಭಿಯೋಜನೆಯ ಪರ ದಾಖಲಿಸಲ್ಪಟ್ಟ ದಾಖಲೆಗಳುಃ**

ನಿಪಿ.1 - ದೂರು

ನಿಪಿ.1(ಎ) - ಸಹಿ

ನಿಪಿ.2 - ಪ್ರ.ವ.ವರದಿ

ನಿಪಿ.3 - ಸ್ಥಳ ಪಂಚನಾಮೆ

ನಿಪಿ.3(ಎ) - ಸಹಿ

ನಿಪಿ.4 - ಪ್ರಾ.ಸಾ 2 ರವರ ಹೇಳಿಕೆ

**ಅಭಿಯೋಜನೆಯ ಪರ ವಿಚಾರಣೆಯಲ್ಲಿ ಗುರುತಿಸಲ್ಪಟ್ಟ ಮುದ್ದೆಮಾಲುಗಳುঃ**

**- ಇಲ್ಲ -**

**ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳುঃ**

**- ಇಲ್ಲ -**

**ಆರೋಪಿತರ ಪರ ದಾಖಲಿಸಲ್ಪಟ್ಟ ದಾಖಲೆಗಳುঃ**

**- ಇಲ್ಲ -**

**(ಚಂದ್ರಿಕಾ. ಕೆ. ಟಿ.)**

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವನಹಳ್ಳಿ**